ಜಲಸಂಪನ್ಮೂಲ ಇಲಾಖೆಯ ಅಭಿವೃದ್ಧಿ ಕಾರ್ಯಗಳ ಬಗ್ಗೆ.

ಪ್ರಶ್ನೋತ್ತರಗಳು : ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :32(317)

ಸದಸ್ಯರ ಹೆಸರು :ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡರು. (ಶ್ರೀರಂಗಪಟ್ಟಣ)

ಅ) ರಾಜ್ಯದ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿನ ನೀರಾವರಿ ನಿಗಮಗಳೆಷ್ಟು ;ಅವು ಯಾವುವು?

ರಾಜ್ಯ ಜಲಸಂಪನ್ಮೂಲ ಇಲಾಖೆಯಲ್ಲಿ ಮೂರು ನಿಗಮಗಳು ಕಾರ್ಯ ನಿರ್ವಹಿಸುತ್ತಿದೆ.1.ಕಾವೇರಿ ನೀರಾವರಿ ನಿಗಮ ನಿಯಮಿತ 2.ಕರ್ನಾಟಕ ನೀರಾವರಿ ನಿಗಮ ನಿಯಮಿತ ;ಮತ್ತು 3. ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತ.

ಆ) ಕಾವೇರಿ ನೀರಾವರಿ ನಿಗಮಕ್ಕೆ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ;

2009-10ನೇ ಸಾಲಿನ ರೂ.661.72 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಕಾವೇರಿ ನೀರಾವರಿ ನಿಗಮದ ವಿಭಾಗವಾರು ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ; ಅದರಲ್ಲಿ ವೇತನ/ಸಿಬ್ಬಂದಿ ವೆಚ್ಚ ಹೊರತು ಪಡಿಸಿ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು.

ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ (ಅನುಬಂಧ-1).

ಈ) ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದಲ್ಲಿನ ಮುಂದುವರೆದ ಕಾಮಗಾರಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ; ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ.

ಶ್ರೀರಂಗಪಟ್ಟಣ ಕ್ಷೇತ್ರದ ಅಡಿಯಲ್ಲಿ ಕಳೆದ ಸಾಲಿನಲ್ಲಿ ಮುಂದುವರೆದ 53 ಕಾಮಗಾರಿಗಳನ್ನು ಈ ಸಾಲಿನಲ್ಲಿ ಆಳವಡಿಸಿಕೊಂಡಿದ್ದು, ಅವುಗಳಿಗಾಗಿ ರೂ.338.55 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ. ಈ ಕಾಮಗಾರಿಗಳ ವಿವರ ಮತ್ತು ಪ್ರಸ್ತುತ ಹಂತವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.

ಉ) ಕಾವೇರಿ ನೀರಾವರಿ ನಿಗಮದ ವತಿಯಿಂದ ಹೊಸ ಕಾಮಗಾರಿಗಳಿಗೆ ಮಂಜೂರಾಗಿರುವ ಹಣ ಎಷ್ಟು ; ಕೈಗೊಳ್ಳಲಾಗಿರುವ ಕಾಮಗಾರಿಗಳಾವುವು?

2009-10ನೇ ಸಾಲಿನಲ್ಲಿ 2342 ಸಂಖ್ಯೆ ಹೊಸ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಇವುಗಳಿಗೆ ನಿಗದಿಸಿರುವ ಅನುದಾನ ರೂ 9680.00 ಲಕ್ಷಗಳಾಗಿರುತ್ತದೆ.ಈ ಹೊಸ ಕಾಮಗಾರಿಗಳಲ್ಲಿ ನೀರಾವರಿ ಸಾಮರ್ಥ್ಯ ಕಲ್ಪಿಸುವ ಕಾಮಗಾರಿಗಳು, ಅಭಿವೃದ್ಧಿ ಮತ್ತು ನಿರ್ವಹಣಾ ಕಾಮಗಾರಿಗಳು ಸೇರಿವೆ.

ಊ) ಸಿ.ಡಿ.ಎಸ್, ವಿರಿಜಾನಾಲೆ, ಅರ್.ಬಿ.ಎಲ್.ಎಲ್, ಎಲ್. ಬಿ.ಎಲ್.ಎಲ್, ದೇವರಾಯಿ ನಾಲೆಗಳು 300 ವರ್ಷ ಹಳೆಯದಾಗಿದ್ದು, ಸರ್ಕಾರ ಇವುಗಳ ಅಭಿವೃದ್ಧಿಯ ಬಗ್ಗೆ ಗಮನ ಹರಿಸಿದೇಯೇ ; ಕೈಗೊಳ್ಳಲಾದ ಯೋಜನೆ ಯಾವುದು?

ಚಿಕ್ಕದೇವರಾಯ ಸಾಗರ (ಸಿ.ಡಿ.ಎಸ್) ನಾಲೆ, ದೇವರಾಯ ನಾಲೆ, ವಿರಿಜಾ ನಾಲೆ ಆರ್.ಬಿ.ಎಲ್.ಎಲ್.ನಾಲೆಗಳಲ್ಲಿ ಈಗಾಗಲೇ 2003–04ನೇ ಸಾಲಿನಿಂದ ಈವರೆಗೆ ಒಟ್ಟು ರೂ.687.89 ಲಕ್ಷಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಅವುಗಳ ವಿವರಗಳನ್ನು ಅನುಬಂಧ–3ರಲ್ಲಿ ಒದಗಿಸಲಾಗಿದೆ. ಸಿ.ಡಿ.ಎಸ್.,ದೇವರಾಯ ಮತ್ತು ವಿರಿಜಾ–ಈ ಮೂರು ಅಣೆಕಟ್ಟು ಮತ್ತು ನಾಲೆಗಳನ್ನು ಆಧುನೀಕರಣಗೊಳಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದ್ದು, ಮೊದಲ ಹಂತದಲ್ಲಿ ಸಿ.ಡಿ.ಎಸ್ ವಿಸ್ತರಣಾ ನಾಲೆ ಹಾಗೂ ದೇವರಾಯ ನಾಲೆಗಳ ವಿವರವಾದ ಸರ್ವೆ ಕಾರ್ಯವನ್ನು ಈಗಾಗಲೇ ನಿರ್ವಹಿಸಲಾಗಿದೆ. ಇವುಗಳ ವಿವರವಾದ ಅಂದಾಜು ಡಿ.ಪಿ.ಆರ್ ತಯಾರಿಕೆ ಹಂತದಲ್ಲಿದೆ. ಅದೇ ಪ್ರಕಾರ ವಿರಿಜಾ ನಾಲೆ ಆಧುನೀಕರಣಕ್ಕಾಗಿ ಸರ್ವೆಯನ್ನು ಕೈಗೆತ್ತಿಕೊಂಡಿದ್ದು ಪ್ರಗತಿಯಲ್ಲಿದೆ.

ಋ) ಕೆ.ಆರ್.ಎಸ್. ವಜ್ರ ಮಹೋತ್ಸವದ ಬಗ್ಗೆ ಸರ್ಕಾರದ ನಿಲುವೇನು ; ಕೈಗೊಂಡಿರುವ ಕ್ರಮಗಳೇನು?

ಕೃಷ್ಣರಾಜಸಾಗರ ಜಲಾಶಯ ಯೋಜನೆಗೆ 1933 ರಲ್ಲಿ ಚಾಲನೆ ನೀಡಲಾಗಿದ್ದು, 2008 ರಲ್ಲಿ ವಜ್ರ ಮಹೋತ್ಸವ ಆಚರಿಸುವ ಬಗ್ಗೆ ಆಗ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದ್ದುದರಿಂದ ಯಾವ ನಿರ್ಧಾರವನ್ನು ಕೈಗೊಂಡಿರುವುದಿಲ್ಲ. ಕೆ.ಆರ್.ಎಸ್. ಜಲಾಶಯದ +80 ಅಡಿ ಮಟ್ಟದ ಗೇಟುಗಳ ಬದಲಾವಣೆಗೆ ಕ್ರಮ ಕೈಗೊಂಡಿದ್ದು, ಕಾಮಗಾರಿಗಳು ಪೂರ್ಣಗೊಂಡ ನಂತರ ವಜ್ರ ಮಹೋತ್ಸವ ಆಚರಣೆ ಬಗ್ಗೆ ತೀರ್ಮಾನಿಸಲಾಗುವುದು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.,ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 317ಕ್ಕೆ ಅನುಬಂಧ–1

2009–10ನೇ ಸಾಲಿನ ವಿಭಾಗವಾರು ಹಂಚಿಕೆಯಾಗಿರುವ ಅನುದಾನದ ವಿವರಗಳು.

ಕ್ರಮ ಸಂಖ್ಯೆ	ವಲಯ/ವಿಭಾಗ	ವೇತನ	ಕಾಮಗಾರಿ	ಒಟ್ಟು
1.	ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ	244.46	1827.00	2071.46
2.	ಕಬಿನಿ ನಾಲೆಗಳ ವಿಭಾಗ ,ನಂಜನಗೂಡು.	235.43	2951.00	3186.43
3.	ಕಬಿನಿ ನಾಲಾ ವಿತರಣಾ ವಿಭಾಗ, ಟಿ.ನರಸೀಪುರ	213.83	1849.00	2062.83

4.	ನಂ.2, ಕಬಿನಿ ನಾಲಾ ವಿಭಾಗ ಕೊಳ್ಳೇಗಾಲ.	225.23	1310.00	1535.23
5.	ನಂ.2 ವಿ.ಸಿ.ಸಿ. ವಿಭಾಗ , ಮೈಸೂರು.	338.81	239.00	577.81
6.	ಕಾರ್ಯಪಾಲಕ ಇಂಜಿನಿಯರ್	345.53	1140.50	1486.03
7.	ಕಾರ್ಯಪಾಲಕ ಇಂಜಿನಿಯರ್ ರೂಪರೇಖಾ ಮತ್ತು	125.99	278.00	403.99
8.	ಕಾರ್ಯಪಾಲಕ ಇಂಜಿನಿಯರ್ ಕೆ ಆರ್.ಎಸ್ ವಿಭಾಗ	479.49	785.50	1264.99
9.	ಕಾರ್ಯಪಾಲಕ ಇಂಜಿನಿಯರ್ ಕೃಷ್ಣರಾಜ ಆಧುನೀಕರಣ	237.19	615.00	852.19
10.	ಕಾರ್ಯಪಾಲಕ ಇಂಜಿನಿಯರ್ ಮಂಚನಬೆಲೆ ಯೋಜನಾ	176.51	2559.00	2735.51
11.	ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ	296.65	1183.50	1480.15
12	ಹಾರಂಗಿ ನಾಲಾ ವಿಭಾಗ, ಸಾಲಿಗ್ರಾಮ	230.55	156.80	387.35
13.	ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ	167.29	244.70	411.99
14.	ಮುಖ್ಯ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಕಛೇರಿಗಳು ಮತ್ತು ಭೂಸ್ವಾಧೀನ ಇತ್ಯಾದಿಗಳಿಗೆ			2007.04
	ಒಟ್ಟು –1	3316.96	15139.00	20463.00
//	ಹೇಮಾವತಿ ಯೋಜನಾ ವಲಯ, ಗೊರೂರು			
1.	ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು	479.00	2357.00	2836.00
2.	ನಂ 1 ಹೇ.ಬ.ಮೇ.ನಾ. ವಿ ಗೊರೂರು	235.00	1132.00	1367.00
3.	ಹೇ.ಬ.ದ.ನಾ.ವಿಭಾಗ, ಹೊಳೆನರಸೀಪುರ	211.00	2284.00	2495.00
4.	ಯಗಚಿ ಯೋಜನಾ ವಿಭಾಗ, ಬೇಲೂರು	172.00	2380.00	2552.00
5.	ನಂ 1 ಹೇ.ಎ.ನಾ.ವಿಭಾಗ ಚನ್ನರಾಯಪಟ್ಟಣ	302.00	360.00	662.00
6.	ನಂ 3 ಹೇ. ಎ.ನಾ.ವಿಭಾಗ ಕೆ.ಆರ್.ಪೇಟೆ	253.00	205.00	458.00
7.	ನಂ 6.ಹೇ.ಎ,ನಾ. ವಿಭಾಗ ಪಾಂಡವಪುರ	198.00	154.00	352.00
8.	ನಂ 7.ಹೇ.ಎ.ನಾ ವಿಭಾಗ ನಾಗಮಂಗಲ	184.00	145.00	329.00

9.	ಗುಣ ನಿಯಂತ್ರಣ ವಿಭಾಗ,ಗೊರೂರು	115.00	16.00	131.00
10.	ಮುಖ್ಯ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಕಛೇರಿಗಳು ಮತ್ತು ಭೂಸ್ವಾಧೀನ ಇತ್ಯಾದಿಗಳಿಗೆ			1151.00
	ಒಟ್ಟು –//	2149.00	9033.00	12333.00
///	ಹೇಮಾವತಿ ನಾಲಾ ವಲಯ, ತುಮಕೂರು			
1.	ಹೇಮಾವತಿ ನಾಲಾ ವಿಭಾಗ, ತುಮಕೂರು	286.00	1302.00	1688.00
2.	ಹೇಮಾವತಿ ನಾಲಾ ವಿಭಾಗ, ಎಡಿಯೂರು	210.00	1416.00	1826.00
3.	ನಂ.4 ಹೇಮಾವತಿ ನಾಲಾ ವಿಭಾಗ, ತುರುವೇಕೆರೆ.	187.00	1288.00	1575.00
4.	ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು	192.00	1993.00	2585.00
5.	ನಂ.1 ಸಿ.ಎನ್.ಎನ್.ಎಲ್. ವಿಭಾಗ, ನಾಗವಲ್ಲಿ.	75.00	200.00	275.00
	ಮುಖ್ಯ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಕಛೇರಿಗಳು ಮತ್ತು ಭೂಸ್ವಾಧೀನ ಇತ್ಯಾದಿಗಳಿಗೆ			350.00
	ಒಟ್ಟು –///	950.00	6199.00	8299.00
	misscellaneous			1066.00
	ಒಟ್ಟು	6415.96	30371.00	42161.00

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.,ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 317ಕ್ಕೆ ಅನುಬಂಧ–2

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ಸಂಬಧಿಸಿದ 09–10ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ:– SPILLOVER WORKS

Sl no	AWP SL. NO	NAME OF WORK	FEF TO SANCTION	TENDER AMOUNT	NAME OF THE AGENCY	AGREEMENT NO AND DATE	EXPENDITURE UPTO 31-01-09	BALANCE COST UNDER THE CONTRACT	GRANT ALLOTED FOR 2008-09	REMARKS
1	AAW P440	Construction of culvert and road bridge and service road to srirama colony near Bergi Branch.	DR.No. 49/08-09-2.00	1.97	N.V. Raju	63/08–09 18–02–09	–	1.97	1.97	WORK Completed
2	AAW P441	Improvement to road from virija 18TH mile to Belavadi Harijana colony	D.R. No50 /08-09 2.00	1.98	H.B.parama shivaiah hunjanakere	62/08-09 18.02.09	-	1.98	1.98	WORK Completed
3.	367	Upgradation of road from MNPM circle to aralikatte circle of K.R.sagara.	WORK Completed 154/07-08 427.50	480.00	P.Ravishankar	34/08-09 19-11-2008	60.00	420.00	140.00	Under progress
4	368	Improvements of road from Aralikatte circle upto junction point of approach road to East face	CER-156/07-08 95.00	200.00	J.Bapuji	37/08-09 19.11.200	20.00	180.00	60.00	Under progress

		main entrance of Brindavan				8				
5	369	ಕೃಷ್ಣರಾಜಸಾಗರದ ಕೆಳ ಸೇತುವೆ ಬಳಿ ಪಂಚಪಥ (5 ಲೇನ್)ಟೋಲ್ ಪ್ಲಾಜಾ ನಿರ್ಮಾಣ ಕಾಮಗಾರಿ								
6	17	ಕೃಷ್ಣರಾಜಸಾಗರ ದಕ್ಷಿಣ ಬೃಂದಾವನದಲ್ಲಿ ನೀರಿನ ಶುದ್ದೀಕರಣ ಯಂತ್ರಗಾರ ಅಳವಡಿಸುವ ಕಾಮಗಾರಿ	CR35/06-07 Rs.8.00	8.60	Prabhakar	335/07-08 27/11/08	6.18	0.80	0.40	Completed
7	196	Providing PCC slab covering to the duct all along the KRS Dam	DR597/06-07 Rs.5.00	6.16	Honnagirigowda	572/07-08 11/3/08	0.00	6.00	3.00	Completed
8	198	Providing junction Boxes to the Ballad fittings at south Bridavan of KR sagara	DR 8/07-08 Rs.2.00	2.00	C.Rajendra	269/07-08 12/10/07	0.00	2.00	1.00	Completed
9	205	ಕೃಷ್ಣರಾಜಸಾಗರ ದಕ್ಷಿಣ ಬೃಂದಾವನ ಉದ್ಯಾನವನದಲ್ಲಿ ಕುಡಿಯುವ ನೀರಿಗಾಗಿ ಪ್ರೆಜರ್ ಫಿಲ್ಟರ್ ಒದಗಿಸಿ ಅಳವಡಿಸುವ ಕಾಮಗಾರಿ	CR 141/07-08 Rs.8.00	7.98	Prabhakar	505/07-08 15/2/08	5.49	2.50	1.25	Completed

10	211		DR 608/06-07 Rs.0.90	0.95	K.R.Girish	643/07-08 31/3/08	0.24	0.70	0.35	Completed
11	217	ಕೃಷ್ಣರಾಜಸಾಗರ ಬೃಂದಾವನದ ನೂತನ ಪ್ರವೇಶದ್ವಾರದಲ್ಲಿ ಕಮಾನು ನಿರ್ಮಾಣ ಕಾಮಗಾರಿ.	CER-56/07-08/ 50.00	41.30	N.subbareddy	617/07-08, 25.03.08	9.500	31.80	10.50	Under progress
12.	201	ಕೃಷ್ಣರಾಜಸಾಗರ ಉತ್ತರ ಬೃಂದಾವನ ಉದ್ಯಾವನದ ಪಾದಚಾರಿ ರಸ್ತೆಗಳಿಗೆ ಡಿಸೈನರ್ ಕಾಂಕ್ರೀಟ್ ಟೈಲ್ಸ್ ಅಳವಡಿಸುವ ಕಾಮಗಾರಿ	CR-171/06-07/ 99.00	110.00	C.Ashok	02/07-08	104.00	6.00	2.00	Under progress
13	212	Providing wearing coat to the road over down stream bridgy of north gareden at K.R.sagar	CER 83/07-08/ 20.20	22.31	Basavaraju	619/07-08 26-03-08	-	21.00	7.00	Under progress
14	370	Providing & supplying 500 KVA Generator at south Bridavan Garden at K.R sagar	CER-111/07/ 08 50.00	44.17	M/S Basavashree Electricals Bangalore	30/08-09 24.09.2008	-	44.17	14.80	Under progress
15	371	Providing & supplying 320 KVA Generator at north	CER 112/07-08	35.23	M/s nandi Enterprises Bangalore	31/08-09 24.09.2008	-	35.23	11.95	Under progress

		Bridavan Garden at K.R.sagar	49.00							
16	102	Reconstruction of po,s head wall and providing controlling arrangements at 1/35TH mile of virija canal.	"CR No 59/07-08/10.00	10.4	Narasimha reddy	383/07-08" Dt: 13.12.08	8.24	2.18	1.09	Completed
17	111	Reconstruction of cart bridge at 1/12 mile of CDS extension canal	CR No.80/07-08/10.00	10.6	C.Gurswamy	370/07-08 Dt: 10.12.07	8.55	1.29	0.64	Completed
18	239	Improvement to po canal No. 48 under CDS canal	DR No-148/07-08/5.00	5.36	RAMESH	No-483/ 31-01-08	-	5.36	2.68	Completed
19	236	Improvement to po canal near cheluvrasanakoppalu village limit under C.D.S canal	CR No-183/07-08/10.00	11.04	S.K Devegowda	No.509/07 08/15/2/ 2008	5.000	5.97	2.95	Completed
20	252	Providing protective works to causeway under 29TH mile and sopanam near chinnenahally and	C.R.No 168/06-07/8.00	9.85	NC SUNIL KUMAR	274/ 12-10-07	6.180	3.67	1.81	Completed

		malledowdanakoppal u under CDS canal								
21	265	Reconstrution of Escape sluice at 48TH mile of CDS canal	C.R.No 125/07-08/9.00	9.88	PUTTEGOWDA,GEN DEHOSAHALLY	No.517/ 16-02-08	4.800	5.00	2.53	Completed
22	34	Construction of concrete lining wall to Bevinatalu branch canal under Devarya canal passing through Harijana colony	DR No.85/07-08-10.00	10.67	D.Shivakumar	396/1312-07	8.70	1.95	1.00	Completed
23	377	Desining, fabricating supplying and erection 2 no of stoplog gates to+80 level sluices of KRS Dam	37.00	37.00	M/S Innovtive Engineering Service chennai		11.50	25.50	12.25	Under progress
24	283	Reconsrtuction of p.o's and improvements to canal in 6TH and 7TH mile didarahally hundi pick up under virja canal	DR No.407/ 06-07/5.00	6.14	Srinivasalu reddy	299/ 24.10.07	-	6.10	3.05	Completed

25	228	Construction of outlet to 3rd and 4th mile under utturammanahalla pick under virija canal	Dr.No.65/06-07/2.90	3.32	S.Boraiah	115/ 28.10.06	-	3.30	1.65	Completed
26	61	Construction of cart bridge at ch 9/13th mile of C D S canal	CR 86/03-04/9.98	10.65	S. NAGESH	236/ 30-12-06	10.00	0.60	0.24	Under progress
27	89	Construction of protective wall from ch.0.70 to 0.90 km of R.P.canal	DR No.87/07-08/5.00	5.47	Vasudeva murthy	452/07-08 Dt: 23.01.08	0.00	4.00	1.60	Under progress
28	94	Construction of cattle ramp and protective wall at ch.12th km of R.P.canal	DR No 92/07-08/5.00	5.47	Venkatesh	394/07-08 Dt: 13.12.07	0.00	5.40	2.16	Under progress
29	242	Construction of CTC and CC lining wall in yeremane pickup canal under 16th mile CDS canal	C.R.No 129/07-08/ 10.00	11.00	KP RAMESH	No 504/15-02-08	7.500	3.50	1.40	Under progress
30	243	Reconstruction of CTC and CC lining wall in 2nd and 4rd km of kirangoor	C.R. No. 123/07-08/	11.02	N. NAGARAJ	No 605/ 25-03-08	8.000	3.02	1.21	Under progress

		pickup canal under 61st and 62nd PO of CDS canal	10.00							
31	244	Providing C C lining in 21st mile under under C D S canal	DR No-545/02-03/ 5.00	5.99	N SRIIVAS MURTHY	22/ 11.07-06	5.59	0.40	0.16	Under progress
32	246	Improvements to canal under PO no 101 under CDS canal	DR No46/0 708/ 2.00	2.22	K MANJU NATH	NO-512/ 16-02-08	-	2.20	0.88	Under progress
33	247	Reconstruction of bridge near U.T at ch 17/25th mile under CDS canal near pattasomanahally village	CR 176/06-07/ 10.00	11.65	NINGE GOWDA	544/ 27-02-08	10.50	1.15	0.46	Under progress
34	253	Providing C C lining wall in 51st km under under CDS canal	CER No-318/03-04/ 70.00	70.00	RAYYAVO O	74/ 12-05-04	66.00	4.00	1.60	Under progress
35	255	Providing CC lining in 128th PO canal near M Shettahally and km of	D.R. No.455/ 06-07/ 5.00	5.77	K ESHWAR	566/ 03-03-08	-	5.70	2.28	Under progress

		Ramachary pickup canak under 33rd mile of CDS canal								
36	261	Construction of lining wall in mothrayana branch canal under 38th mile of CDS canal	C.R. No148 /07-08/ 7.00	7.63	C CHAME GOWDA	No546/ 02-08	6.600	1.03	0.41	Under progress
37	263	Providing CC lining wall in 149th PO under 39th mile of CDS canal	DRNo 81/07-08/ 2.00	2.20	E RAMU	No-417/ 27-12-07	1.000	1.20	0.48	Under progress
38	264	Providing CC lining wall and cistem in 15th PO under the 40th mile of CDS canal	DR No-82/07-08/ 2.00	2.26	E RAMU	No-419/ 27-12-07	0.900	1.30	0.52	Under progress
39	372	Improvements to spill way of Devaratya anicut	D.R No.22/08-09/ 2.00	2.14	K.Jagadish	No.43/08-09/3-12-2008	1.000	1.09	0.43	Under progress
40	374	Reconstruction of Escape sluice at 15 /7th mile of virija canal	D.R. No.23/08-09/ 1.90	1.99	K.Jagadish	No.42/08-09/3-12-2008	1.000	0.92	0.36	Under progress
41	282	Construction of cart bridge across the hall	CER No.164/	15.51	B.T.Sada Shiva	466/06-07 Dt:	14.55	0.95	0.40	Under progress

		at down stream of chikaankanahalli tank under virij canal	06-07/ 15.50			30/3/07				
42	284	Reconstruction of p o's and improvements to meggalluve in 3rd mile under virija canal	DR No. 409/06-07/ 5.00	6.12	Srinivasalur eddy	295/ 24.10.07	-	6.10	2.50	Under progress
43	218	Construction of p o's of bridge and escape sluice at Head works of Devaraya canal	158/06-07/ 10.00	11.44	Thyagaraju	173/ 24-7-07	4.00	7.40	3.03	Under progress
44	219	Widening of 8th mile deep cut of Davaraya canal	86/07/08/ 10.00	9.82	K.B. Chethan	346/ 07-08/	5.44	4.38	7.75	Under progress
45	386	AMC of Brindavan garden	CER 11/08-09/Rs.95.00	95.00	Sakaet Electricals Bangalore	59/08-09/4-2-2009	15.00	60.00	20.00	
46	406	Removal of silt and jungle in marigudi branch and 43rd mile of virija canal	DR No.16/08-09/ 0.73	0.47	B.Narayana	No-15/08-09/ 19.08.08	-	0.47	0.47	Completed
47	407	Removal of silt and	DR	0.29	K.M. Suresh	No-20/08-	-	0.29	0.29	Completed

		jungle in selected reaches from ch 0 to 5 mile of kigalluve of chickaankannaly tank	No.10/08-09/0.50		No-20/08-09/19.08.08	09/19.08.08				
48	408	Removal of silt and jungle in selected reaches from ch 0 to 4 mile of Bidrahallyhundi pickup canal under virija canal	DR No.6/08-09/0.50	0.30	K.M. Suresh	No,-19/08-09/19-08-08	-	0.30	0.30	Completed
49	179	Repairs to control room At North Brindavan Garden, generator Room at RBLL and dam top	DR 234/07-08 Rs.5.00	4.58	K.Kumar	594/07-08 17/03/08	2.63	1.79	1.79	Completed
50	439	Providing partion and electrification to Division office for computer Room	DR No-1/08-09 Rs1.60	1.52	B.R.Girish	No-84/08-09/09.03.09	-	1.52	1.521	Completed
51		ಲೋಕಸರ ಶಾಖೆಯ ವಿತರಣಾ ನಾಲೆ 14ರ ಸೂನಗಹಳ್ಳಿ ಎಡ ಭಾಗದ ಪಿಕಪ್ ಅಭಿವೃದ್ಧಿ ಕಾಮಗಾರಿ	CR.No 67/07-08 Rs. 10.00	10.98	M.N. Chandra Shekar	326/07-08, 6-2-08	-	4.20	1.39	
52		ಲೋಕಸರ ಶಾಖೆಯ	CR.No	11.02	369/07-08,	-	4.20	1.39		

		ವಿತರಣಾ ನಾಲೆ 14ರ ಭೂತನ ಹೊಸೂರು ಪಿಕಪ್‌ನ ಸರಪಳಿ 2500–2900ಮೀ ವರೆಗೆ ಅಭಿವೃದ್ಧಿ ಕಾಮಗಾರಿ	66/07-08,Rs.10.00	G,V.Prakash	19-3-08					
53		ಕಾವೇರಿ ಶಾಖೆಯ ವೈಯರ್ರಹಳ್ಳಿ ಹತ್ತಿರ ರಸ್ತೆ ಸೇತುವೆ ನಿರ್ಮಾಣ ಕಾಮಗಾರಿ	CER. No.95/06-07, Rs.19.00	23.87	R.Mani	55/07-08, 2-6-07	10.25	8.00	3.68	
		Total		1423.25			428.34	949.58	338.55	

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.,ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 317ಕ್ಕೆ ಅನುಬಂಧ–3
ಶ್ರೀರಂಗಪಟ್ಟಣ ವ್ಯಾಪ್ತಿಯಲ್ಲಿ ಬರುವ ಅಣೆಕಟ್ಟಿನ ನಾಲೆಗಳಲ್ಲಿ 2003–04 ಇಂದ 2006–07ರ ವರೆಗೆ ಕೈಗೊಳ್ಳಲಾಗಿರುವ ಕಾಮಗಾರಿಗಳು

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಆರ್ಥಿಕ ವೆಚ್ಚ	ಕಾಮಗಾರಿಯ ಈಗಿನ ಹಂತ
	ವಿರಿಜಾ ನಾಲೆ			
1	ವಿರಿಜಾ ನಾಲೆಯ 24ನೇ ಮೈಲಿಯಲ್ಲಿ ಸಿ.ಸಿ.ಲೈನಿಂಗ ಹಾಗೂ ಅಭಿವೃದ್ಧಿ ಕಾಮಗಾರಿ	46.00	41.6	ಕಾಮಗಾರಿ ಮುಕ್ತಾಯಗೊಂಡಿರುತ್ತದೆ.
2	ವಿರಿಜಾ ನಾಲೆಯ 7ನೇ ಮೈಲಿ ರಂಗನತಿಟ್ಟಿನ ಹತ್ತಿರ ಕೆ.ಆರ್.ಎಸ್. ಮತ್ತು ಶ್ರೀರಂಗಪಟ್ಟಣ ರಸ್ತೆ ಕ್ರಾಸಿಂಗ್ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಸಿ.ಸಿ.ಲೈನಿಂಗ್	24.00	22.73	ಕಾಮಗಾರಿ ಮುಕ್ತಾಯಗೊಂಡಿರುತ್ತದೆ.

	ಮಾಡುವ ಕಾಮಗಾರಿ			
4	ವಿರಿಜಾ ನಾಲೆಯ 22ನೇ ಕಿ.ಮೀ.ನಲ್ಲಿ ಅಭಿವೃದ್ಧಿ ಕಾಮಗಾರಿ,ಏರಿ ಅಭಿವೃದ್ಧಿ ಮತ್ತು ಸಿ.ಸಿ.ಲೈನಿಂಗ್ ಕಾಮಗಾರಿ	46.00	45.15	ಕಾಮಗಾರಿ ಮುಕ್ತಾಯಗೊಂಡಿರುತ್ತದೆ.
5	ವಿರಿಜಾ ನಾಲೆಯ 19ನೇ ಕಿ.ಮೀನಲ್ಲಿರುವ ಮೈಸೂರು ಬೆಂಗಳೂರು ರಸ್ತೆ ಸೇತುವೆಯ ಮೇಲ್ಬಾಗ ಮತ್ತು ಕೆಳಭಾಗದ ಆಯ್ದಭಾಗಗಳಲ್ಲಿ ಸಿ.ಸಿ.ಗೋಡೆಯಿಂದ ರಕ್ಷಣಾ ಕಾಮಗಾರಿ	50.00	51.7	ಕಾಮಗಾರಿ ಮುಕ್ತಾಯಗೊಂಡಿರುತ್ತದೆ.
6	ವಿರಿಜಾ ನಾಲೆಯ 15ನೇ ಕಿ.ಮೀನಲ್ಲಿರುವ ಮೈಸೂರು ಬೆಂಗಳೂರು ರಸ್ತೆ ಸೇತುವೆಯ ಮೇಲ್ಬಾಗ ಮತ್ತು ಕೆಳಭಾಗದ ಆಯ್ದಭಾಗಗಳಲ್ಲಿ ಸಿ.ಸಿ.ಗೋಡೆಯಿಂದ ರಕ್ಷಣಾ ಕಾಮಗಾರಿ	50.00	53.35	ಕಾಮಗಾರಿ ಮುಕ್ತಾಯಗೊಂಡಿರುತ್ತದೆ
7	ವಿರಿಜಾ ನಾಲೆಯ 14/1ನೇ ಮೈಲಿಯಲ್ಲಿ ಗಾಡಿ ಸೇತುವೆ ಮರು ನಿರ್ಮಾಣ ಹಾಗೂ ಆಗಮನ ನಿರ್ಗಮನ ಭಾಗದಲ್ಲಿ ಲೈನಿಂಗ್ ಕಾಮಗಾರಿ	50.00	50.89	ಕಾಮಗಾರಿ ಮುಕ್ತಾಯಗೊಂಡಿರುತ್ತದೆ
	ಒಟ್ಟು	266.00	265.42	
	ದೇವರಾಯ ನಾಲೆ			
1	ದೇವರಾಯ ನಾಲೆಯ 0.00ಮೀ ನಿಂದ 1600 ಮೀ ವರೆಗೆ ಸಿ.ಸಿ.ಲೈನಿಂಗ್ ಕಾಮಗಾರಿ	80.00	43.57	ಕಾಮಗಾರಿ ಮುಕ್ತಾಯಗೊಂಡಿರುತ್ತದೆ
2	ದೇವರಾಯ ನಾಲೆಯ 15.00 ನೇ ಮೈಲಿಯ ಬೆಡ್ ಲೈನಿಂಗ್ ಅಭಿವೃದ್ಧಿ, ಕಂಟ್ರೋಲಿಂಗ್ ಕೆಲಸಗಳು ಮತ್ತು ಸಿ.ಸಿ. ಗೋಡೆ ನಿರ್ಮಿಸುವ ಕಾಮಗಾರಿ	27.20	19.6	ಕಾಮಗಾರಿ ಮುಕ್ತಾಯಗೊಂಡಿರುತ್ತದೆ
	ಒಟ್ಟು	107.20	63.17	
	ಸಿ.ಡಿ.ಎಸ್.			
1	ಸಿ.ಡಿ.ಎಸ್. ನಾಲೆಯ 55ನೇ ಮೈಲಿಯಲ್ಲಿ ಸಿ.ಸಿ. ಲೈನಿಂಗ್ ಗೋಡೆ ನಿರ್ಮಾಣ ಕಾಮಗಾರಿ	70.00	70.8	ಕಾಮಗಾರಿ ಮುಕ್ತಾಯಗೊಂಡಿರುತ್ತದೆ
2	ಸಿ.ಡಿ.ಎಸ್. ನಾಲೆಯ 58ನೇ ಮೈಲಿಯಲ್ಲಿ ಸಿ.ಸಿ. ಲೈನಿಂಗ್ ಗೋಡೆ ನಿರ್ಮಾಣ	70.00	68	ಕಾಮಗಾರಿ

	ಕಾಮಗಾರಿ			ಮುಕ್ತಾಯಗೊಂಡಿರುತ್ತದೆ
3	ಸಿ.ಡಿ.ಎಸ್. ನಾಲೆಯ 57ನೇ ಮೈಲಿಯಲ್ಲಿ ಸಿ.ಸಿ. ಲೈನಿಂಗ್ ಗೋಡೆ ನಿರ್ಮಾಣ ಕಾಮಗಾರಿ	70.00	68.2	ಕಾಮಗಾರಿ ಮುಕ್ತಾಯಗೊಂಡಿರುತ್ತದೆ
4	ಸಿ.ಡಿ.ಎಸ್. ನಾಲೆಯ 51ನೇ ಮೈಲಿಯಲ್ಲಿ ಸಿ.ಸಿ. ಲೈನಿಂಗ್ ಗೋಡೆ ನಿರ್ಮಾಣ ಕಾಮಗಾರಿ	70.00	37.00	ಕಾಮಗಾರಿ ಮುಕ್ತಾಯಗೊಂಡಿರುತ್ತದೆ
5	ಸಿ.ಡಿ.ಎಸ್. ನಾಲೆಯ 53ನೇ ಮೈಲಿಯಲ್ಲಿ ಸಿ.ಸಿ. ಲೈನಿಂಗ್ ಗೋಡೆ ನಿರ್ಮಾಣ ಕಾಮಗಾರಿ	70.00	67.70	ಕಾಮಗಾರಿ ಮುಕ್ತಾಯಗೊಂಡಿರುತ್ತದೆ
	ಒಟ್ಟು	350.00	311.70	
	ಆರ್.ಬಿ.ಎಲ್.ಎಲ್.			
1	ಆರ್.ಬಿ.ಎಲ್.ಎಲ್. ನಾಲೆಯ 8/ನೇ ಮೈಲಿಯಲ್ಲಿ ಕವರ್ ಡಕ್ಟ್ ಮರು ನಿರ್ಮಾಣ	50.00	47.6	ಕಾಮಗಾರಿ ಮುಕ್ತಾಯಗೊಂದಿರುತ್ತದೆ
	ಒಟ್ಟು	50.00	47.60	

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ: ವಿರಿಜಾ ನಾಲೆ, ಸಿ.ಡಿ.ಎಸ್, ಆರ್.ಬಿ.ಎಲ್.ಎಲ್., ಎಲ್.ಬಿ.ಎಲ್.ಎಲ್. ನಾಲೆಗಳು ಸುಮಾರು 300 ವರ್ಷಗಳಷ್ಟು ಹಳೆಯ ನಾಲೆಗಳಾಗಿದ್ದು ಇವುಗಳ ದುರಸ್ತಿ ಬಗ್ಗೆ ನಮ್ಮ ತಂದೆಯವರಾದ ದಿವಂಗತ ಬಂಡಿ ಸಿದ್ದೇಗೌಡರವರು ಶಾಸಕರಾಗಿದ್ದಾಗಿನಿಂದಲೂ ಪ್ರಯತ್ನ ಮಾಡುತ್ತ ಬಂದಿದ್ದೇವೆ. ಆದರೆ ಯಾವ ಕಾರಣಕ್ಕೋ ಎನೋ ಇದುವರೆಗೆ ಸುಮಾರು 45 ವರ್ಷಗಳ ಹಿಂದೆ ಪ್ರಾರಂಭವಾದಂಥ ವಿ.ಸಿ.ನಾಲೆಯನ್ನು ಆಧುನೀಕರಣ ಮಾಡಿದರು. ಆದರೆ, ಸಿಡಿಎಸ್, ವಿರಿಜಾನಾಲೆ, ಬಂಗಾರದೊಡ್ಡಿ, ಆರ್.ಬಿ.ಎಲ್.ಎಲ್., ಎಲ್.ಬಿ.ಎಲ್.ಎಲ್. ದೇವರಾಯ, ರಾಮಸ್ವಾಮಿ ನಾಲೆ, ರಾಜಪರಮೇಶ್ವರಿ ನಾಲೆ ಇವೆಲ್ಲ ಸುಮಾರು 300 ವರ್ಷಗಳ ಹಳೆಯದಾದ ನಾಲೆಗಳಾಗಿವೆ. ಇವುಗಳನ್ನು modernization of works ನಲ್ಲಿ ತೆಗೆದುಕೊಂಡಿಲ್ಲ. ಜೊತೆಗೆ, ಈ ನಾಲೆಗಳಲ್ಲಿ ಅದರಲ್ಲೂ ಸಿ.ಡಿ.ಎಸ್. ನಾಲೆ ಸುಮಾರು 60 ಮೈಲಿ ಉದ್ದವಿದೆ. 60 ಮೈಲಿ ಅದು ಹರಿಯಬೇಕಾದರೆ ಸುಮಾರು 900 ಕ್ಯೂಸೆಕ್ಸ್ ನೀರನ್ನು ಡ್ರಾ ಮಾಡಿ, ಬನ್ನೂರು ಟ್ಯಾಂಕ್‌ಗೆ ಸುಮಾರು 14 ಅಡಿ ನೀರನ್ನು ತುಂಬಿಸಿದ ಮೆಲೆ ಬನ್ನೂರು ಟ್ಯಾಂಕ್‌ನಿಂದ ಮುಂದಕ್ಕೆ ನಮ್ಮ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರ ಕ್ಷೇತ್ರಕ್ಕೆ ಮತ್ತು ಡಾ: ಮಹದೇವಪ್ಪನವರ ಕ್ಷೇತ್ರಕ್ಕೆ ಅಲ್ಲಿಂದ ಮುಂದಕ್ಕೆ ನೀರು ಹರಿದು ಹೋಗುತ್ತದೆ. ಜೊತೆಗೆ, ವಿರಿಜಾನಾಲೆಯಲ್ಲಿ ನೀರು 40–45 ಕಿ.ಮೀ.ವರೆಗೆ ಹೋಗುತ್ತದೆ.ಅದು ನನ್ನ ಕ್ಷೇತ್ರ ವ್ಯಾಪ್ತಿ ಬಿಟ್ಟು ಸನ್ಮಾನ್ಯ ಸಿದ್ದರಾಮಯ್ಯ ಮತ್ತು ಮಹದೇವಪ್ಪರವರ ಎರಡೂ ಕ್ಷೇತ್ರಗಳಲ್ಲೂ ಹರಿಯುತ್ತದೆ. ಇವೆರಡೂ ನಾಲೆಗಳ ಪರಿಸ್ಥಿತಿ ಹೇಗಿದೆ ಎಂದರೆ, ಮೈಸೂರಿನಲ್ಲಿ ಹೆಚ್ಚು ಮಳೆಯಾದರೆ, ಮೈಸೂರಿನಲ್ಲಿ ಬಿದ್ದ ಮಳೆ ನೀರು ವಿರಿಜಾ ನಾಲೆಗೆ ಬಂದು ಅದು ತುಂಬುತ್ತದೆ. ವಿರಿಜಾನಾಲೆ overflow ಆಗುತ್ತದೆ. ಅದು overflow ಆದಾಗ ಸುಮಾರು ಕಡೆ ಪ್ರತಿವರ್ಷ ಮಳೆಗಾಲ ಪ್ರಾರಂಭವಾಯಿತೆಂದರೆ ನಮ್ಮ ಜೀವ ಧಡಧಡ ಎನ್ನುತ್ತದೆ. ಏಕೆಂದರೆ ಎಲ್ಲಿ ಕಾಲುವೆ ಒಡೆಯುತ್ತದೋ, ಅಲ್ಲಿ ಆ ರೈತರ ಜಮೀನು ಎಲ್ಲಿ ಹಾಳಾಗುತ್ತದೋ ಎಂದು ಆತಂಕ ಪ್ರಾರಂಭವಾಗುತ್ತದೆ.

ಅಧ್ಯಕ್ಷರು : ರಮೇಶ್ ಬಂಡಿಸಿದ್ದೇಗೌಡರೆ, ಅವರು ಏನು ಉತ್ತರ ಕೊಟ್ಟಿದ್ದಾರೆ ಅದರ ಮೇಲೆ ತಾವು Specific ಆದ ಪ್ರಶ್ನೆ ಕೇಳಿ. ಸ್ಪಷ್ಟೀಕರಣ ಏನಾದರೂ ಇದ್ದರೆ ಕೇಳಿ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ : ಇದುವರೆಗೆ ಆ ಕಾಲುವೆಗಳ ದುರಸ್ತಿಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಜೊತೆಗೆ, 2008–09ನೇ ಸಾಲಿನಲ್ಲಿ ಏನೇನು ಕಾರ್ಯಕ್ರಮ ಹೊಸಕಾಮಗಾರಿಗಳಿಗಾಗಿ ಹಾಕಿಕೊಳ್ಳಲಾಗಿದೆ ಎನ್ನುವುದನ್ನು ನನಗೆ ಉತ್ತರದಲ್ಲಿ ಒದಗಿಸಿದ್ದಾರೆ. ಕೆ.ಆರ್.ಸಾಗರ ಬೃಂದಾವನ ಅಭಿವೃದ್ಧಿಗೆ ಎಲ್ಲಾ ಕೆಲಸಗಳು ಸೇರಿವೆ, ಜೊತೆಗೆ, ನಾನು ತಿಳಿದ ಹಾಗೆ, 2006–07, 2007–08ನೇ ಇಸವಿಯಿಂದ ಮುಂದುವರೆದ ಕಾಮಗಾರಿಗಳು ಇರಬಹುದು, ಜೊತೆಗೆ, 2–3 ಕೆಲಸ

ಮಾತ್ರ ಈ ವರ್ಷ 2008–09ಕ್ಕೆ ಬಾಕಿ ಇವೆ. ಅದರಲ್ಲಿ Serial No.30-ಸುಮಾರು 2 ಲಕ್ಷದ 14 ಸಾವಿರ ಎಂದು ಇದ್ದು, spill over works ಅದೂ ದೇವರಾಯ ಅಣೆಕಟ್ಟೆಗೆ ಎಂದು ಇದೆ. ಜೊತೆಗೆ, reconstruction of Escape sluice at 15/7th mile of virija canal ಎಂದು ಹೇಳಿ 1 ಲಕ್ಷದ 90 ಸಾವಿರ ರೂ. ಕೊಟ್ಟಿದ್ದಾರೆ. ಜೊತೆಗೆ, ಈ ಸಾಲಿಗೆ ಹೊಸ ಕಾಮಗಾರಿ ಪ್ರಾರಂಭ ಮಾಡಿರುವುದು ಇಲ್ಲವೇ ಇಲ್ಲ. ಎರಡು ಕೆಲಸಗಳಿಗೆ ಮಾತ್ರ ಎಂದು ನನ್ನ ಉತ್ತರದಲ್ಲಿ ಬಂದಿದೆ. ಈ ಭಾಗಕ್ಕೆ ನೀರು ಕೊಡಬೇಕಾದರೆ ತುರ್ತು ಕೆಲಸಗಳನ್ನು ಮಾಡಬೇಕು. ನಾನು ಒಂದು ಪಟ್ಟಿ ಮಾಡಿದ್ದೇನೆ. ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತೇನೆ, ದಯವಿಟ್ಟು ಆ ತುರ್ತು ಕೆಲಸಗಳಿಗೆ ಬಹಳ ಸ್ಪಷ್ಟವಾದ ಆದೇಶ ಕೊಡಬೇಕೆಂದು ಮಾನ್ಯ ಸಚಿವರಿಗೆ, ಸರ್ಕಾರಕ್ಕೆ ತಾವು ಆದೇಶ ಕೊಡಬೇಕು. ಆ ಕೆಲಸಗಳನ್ನು ಅತ್ಯಗತ್ಯವಾಗಿ ಮಾಡಿಕೊಡಬೇಕು. ಜೊತೆಗೆ, ವಿ.ಸಿ.ನಾಲೆಯಲ್ಲಿ 5–6–7 ತೂಬುಗಳಿವೆ. ಆ ತೂಬುಗಳಿಂದ ಬರುವ distributory ಗಳಲ್ಲಿ ನಿಜವಾಗಿಯೂ ಕೊನೆಯ ಭಾಗಕ್ಕೆ ನೀರು ತಲುಪಿಲ್ಲ. ಈ ವರ್ಷ ಸಂಕಷ್ಟ ಪರಿಸ್ಥಿತಿ ಇದೆ. ಅದನ್ನು ನೋಡಿ ನಾನೇ ಒಂದು ಜೆ.ಬಿ.ಸಿ ತರಿಸಿ ಕೆಲಸ ಮಾಡಿಸಬೇಕಾದಂಥ ಅವಶ್ಯಕತೆ ಕಂಡುಬಂತು. ಜನರು ಬಹಳ ನಿಕೃಷ್ಟವಾಗಿ ಮಾತನಾಡುತ್ತಾರೆ. ದಯವಿಟ್ಟು ಈ ಬಗ್ಗೆ ಸ್ಪಷ್ಟವಾದ ನಿಲುವನ್ನು ತಿಳಿಸಬೇಕೆಂದು ಸನ್ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಡಾ : ಹೆಚ್.ಸಿ. ಮಹದೇವಪ್ಪ : ಮಾನ್ಯ ನೀರಾವರಿ ಸಚಿವರು ಮಂತ್ರಿಗಳಾದ ತಕ್ಷಣವೇ ಮೈಸೂರು ಜಿಲ್ಲೆಗೆ ಬಂದು ಕಾವೇರಿ ನೀರಾವರಿ ನಿಗಮದ ಎಲ್ಲಾ ಅಧಿಕಾರಿಗಳ ಸಭೆ ನಡೆಸಿದರು. ಆ ಸಂದರ್ಭದಲ್ಲಿ ಆ ಭಾಗದ ಎಂ.ಎಲ್.ಎಗಳನ್ನೆಲ್ಲ ಕರೆದಿದ್ದರು. ನೀರಾವರಿ ಸಮಸ್ಯೆಗಳ ಬಗ್ಗೆ ಈಗಾಗಲೇ ಅವರ ಗಮನಕ್ಕೆ ತಂದಿದ್ದೇವೆ. 300, 400, 500, 700, 800, ವರ್ಷಗಳಷ್ಟು ಹಳೆಯ ಕಾಲುವೆಗಳಿವೆ. ಜೊತೆಗೆ ನಮಗೆ ಸಿಡಿಎಸ್ ಬನ್ನೂರು ಕೆರೆಯಿಂದ ಮಾನ್ಯ ಬಾಬುರವರು ಹೇಳಿದ ಹಾಗೆ, ನೀರು ಹರಿದು ಬನ್ನೂರು ಭಾಗಕ್ಕೆ ಬರಬೇಕಾದರೆ 106 ಕಿ.ಮೀ. ನಿಂದ ಹರಿದು ಬರಬೇಕು. ಅದೇ ರೀತಿಯಲ್ಲಿ ಮಹದೇವ ಮಂತ್ರಿ ಕೆನಾಲ್ ಗಂಗರಸರ ಕಾಲದ್ದಾಗಿದ್ದು, ಸುಮಾರು 700–800 ವರ್ಷಗಳಷ್ಟು ಹಳೆಯ ಕಾಲುವೆಯಾಗಿದೆ. ರಾಮಸ್ವಾಮಿ ನಾಲೆ 300–400 ವರ್ಷಗಳಷ್ಟು ಹಳೆಯ ಕಾಲದ್ದು. ಇವುಗಳನ್ನೆಲ್ಲ ಆಧುನೀಕರಣಗೊಳಿಸಬೇಕು. ಇಲ್ಲವೆಂದರೆ ಕೊನೆಯ ಭಾಗಕ್ಕೆ ನೀರು ತಲಪುವುದಿಲ್ಲ. ಅಲ್ಲಿರುವ ಅಚ್ಚುಕಟ್ಟನ್ನು ಸಂರಕ್ಷಣೆ ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ಅವರ ಗಮನಕ್ಕೆ ಈಗಾಗಲೇ ತಂದಿದ್ದೇವೆ. ದಯವಿಟ್ಟು ಮಾನ್ಯ ಸಚಿವರು ಇವುಗಳನ್ನು ಆಧುನೀಕರಣಗೊಳಿಸುವ ಮತ್ತು ನೀರು ಸರಾಗವಾಗಿ ಹರಿದಿಹೋಗಲಿಕ್ಕೆ ಅಗತ್ಯವಾದ ತಂತ್ರಜ್ಞಾನಗಳನ್ನು ಬಳಸಿ ಈ ಕಾಲುವೆಗಳನ್ನು ದುರಸ್ತಿ ಮಾಡಿಕೊಡಬೇಕು. ಅದರ ಮೂಲಕ ಆ ರೈತರ ಬೆಳೆ, ಆಹಾರೋತ್ಪಾದನೆಯನ್ನು ಹೆಚ್ಚಿಸಲಿಕ್ಕೆ ಅವರು ಸಹಕಾರ ಕೊಡಬೇಕು.

ಆಧುನೀಕರಣ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತೇವೆ.

ಶ್ರೀ ಬಸವರಾಜ ಬೊಮ್ಮಾಯಿ : ಶಾಸಕರಾದ ಮಾನ್ಯ ರಮೇಶ್ ಬಂಡಿಸಿದ್ದೇಗೌಡರವರು specific ಆಗಿ ಶ್ರೀರಂಗಪಟ್ಟಣ ಕ್ಷೇತ್ರದ ಬಗ್ಗೆ ಪ್ರಶ್ನೆ ಕೇಳಿದ್ದರು. ಅವರ ಕ್ಷೇತ್ರದಲ್ಲಿ ಕಳೆದ ವರ್ಷ 53 work ಗಳನ್ನು ತೆಗೆದುಕೊಂಡಿದ್ದೇವು. ಮಾರ್ಚ್. ಹೊತ್ತಿಗೆ 19 work ಗಳು ಮುಗಿದಿದ್ದು ಈಗ ಜೂನ್‌ಗೆ 8 works ಬಿಟ್ಟರೆ ಮಿಕ್ಕಿದ್ದೆಲ್ಲವೂ ಆಗಿದೆ. ಆ 8 ಕೆಲಸಗಳು ರಸ್ತೆಗೆ ಸಂಬಂಧಪಟ್ಟದ್ದು ಇವೆ. ಅವುಗಳನ್ನೂ ಇದೇ ವರ್ಷದಲ್ಲಿ ಮುಗಿಸುತ್ತೇವೆ. ಇನ್ನು, ತಾವು ಸಿಡಿಎಸ್, ವಿರಿಜಾ, ದೇವರಾಯ ನಾಲೆಗಳ ಬಗ್ಗೆ ಕೇಳಿದ್ದೀರಿ. ಸಿಡಿಎಸ್ ಮತ್ತು ದೇವರಾಯ ನಾಲೆಗಳ survey ಕಾರ್ಯ ಸಂಪೂರ್ಣವಾಗಿ ಮುಗಿದಿದೆ. DPR ತಯಾರಾಗುತ್ತಿದ್ದು ಅದು ಬಂದ ತಕ್ಷಣ, ಒಪ್ಪಿಕೊಂಡ ತಕ್ಷಣವೇ ಆ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ವಿರಿಜಾ ನಾಲೆಯ survey ಕಾರ್ಯಕ್ಕೆ ಆಜ್ಞೆ ಮಾಡಿದ್ದೇನೆ. ಅದರ survey ಆದ ತಕ್ಷಣ ಆ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ತಾವು emergency works ಬಗ್ಗೆ ಹೇಳಿದ್ದೀರಿ. ಅದರ ಬಗ್ಗೆ ತಮ್ಮ ಹತ್ತಿರ ಇರುವ ಪಟ್ಟಿ ಕೊಡಿ. ಯಾವುದು ನಿಜವಾಗಿ emergency works ಇದೆ, ನೀರು ಹರಿಯುವುದಕ್ಕೆ ಎಲ್ಲಾದರೂ ಅಡಚಣೆ ಇದ್ದರೆ, ತೊಂದರೆ ಇದ್ದರೆ ಅಥವಾ ನೀರು ಬಸಿದು ಹೋಗುತ್ತಿದ್ದರೆ ಖಂಡಿತವಾಗಿಯೂ ಅದಕ್ಕೆ ಪ್ರಾಶಸ್ತ್ಯ ಕೊಟ್ಟು ಕೂಡಲೇ ಆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಆದೇಶವನ್ನು ಕೊಡುತ್ತೇನೆ.

ಇನ್ನು ಮಹದೇವಪ್ಪನವರು ಹೇಳಿದ ಹಾಗೆ, ಸಿಡಿಎಸ್ ನಾಲೆ ಸುಮಾರು 60 ಮೈಲಿ ಇದ್ದು ಅದು ಮುಂದೆ ನಿಮ್ಮ ಕ್ಷೇತ್ರಕ್ಕೆ, ವಿರೋಧ ಪಕ್ಷದ ನಾಯಕರ ಕ್ಷೇತ್ರದ ಮೂಲಕ ಹರಿದು ಹೋಗುತ್ತದೆ. ಅಲ್ಲಿ ಬನ್ನೂರು ಟ್ಯಾಂಕ್‌ಗೆ ಹರಿದು ತಮ್ಮ ಕ್ಷೇತ್ರಕ್ಕೆ ಬರುತ್ತಿದೆ. ಅದನ್ನು ಈಗಾಗಲೇ ನಾವು ತೆಗೆದುಕೊಳ್ಳುವುದಕ್ಕೆ DPR ಕೂಡ ತಯಾರು ಮಾಡುತ್ತಿದ್ದೇವೆ. ಇನ್ನು, ರಾಜಪರಮೇಶ್ವರಿ ನಾಲೆ ಬಗ್ಗೆ survey ಮಾಡಲು ಆಜ್ಞೆ ಮಾಡಿದ್ದೇನೆ. ಅದೇ ರೀತಿ, ಕಟ್ಟೇಪುರ, ಹೇಮಾವತಿ, ನಂದಗಿರಿ, ರಾಮಸಮುದ್ರ, ಚಾಮರಾಜ ಇವೆಲ್ಲವೂ ಕೂಡ ಮಹಾರಾಜರ ಕಾಲದ ಅಣೆಕಟ್ಟೆಗಳು. ಅವರು ಹೇಳಿದ ಹಾಗೆ ಅವು 200–300 ವರ್ಷಗಳಷ್ಟು ಹಳೆಯವು. System ಎಲ್ಲ ಬಹಳಷ್ಟು weak ಆಗಿದೆ. ನಾವು ಏನಾದರೂ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಿದರೆ ಆ ಕಾಲುವೆಗಳು ಸಂಪೂರ್ಣವಾಗಿ ಕುಸಿದುಬೀಳುತ್ತವೆ ಎನ್ನುವ ಆತಂಕವಿರುವುದರಿಂದ ಅವುಗಳನ್ನು ಸಂಪೂರ್ಣವಾಗಿ ಸರ್ವೆ ಮಾಡಿ DPR ಮಾಡಿ technical approval ಆಗಿ Board ನಲ್ಲಿ ಕೂಡ approve ಆಗಿದೆ. ಪ್ರಥಮ ಬಾರಿಗೆ ಮಹಾರಾಜರ ಒಪ್ಪಂದ 124 ಕ್ಕಿಂತ ಮುಂಚೆ ಇರುವುದರಿಂದ ಇದನ್ನು ನಾವು CWC ಗೆ refer ಮಾಡಿದ್ದೇವೆ. ನಮ್ಮ ನಿಗಮದ

ಹಣಕಾಸಿನಲ್ಲಿ ಈ ವರ್ಷ ಈ modernization ಅನ್ನು ಬಗ್ಗೆ survey , DPR ಮಾಡಿ ಅದರ modernization ಅನ್ನು ಈ ಹಂತ ಮುಗಿದ ತಕ್ಷಣ ಆ ಕಾಲುವೆ ಕೆಲಸವನ್ನೂ ಕೂಡ ಎರಡನೇ ಹಂತದಲ್ಲಿ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇನೆ.

ಡಾ : ಹೆಚ್.ಸಿ. ಮಹದೇವಪ್ಪ : ರಾಜಪರಮೇಶ್ವರಿ ನಾಲಾ, ಮಹದೇವಮಂತ್ರಿ ಅಣೆಕಟ್ಟೆಯ ಬಗ್ಗೆ ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ : ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ರಾಜಪರಮೇಶ್ವರಿ ನಾಲಾ, ರಾಮಸ್ವಾಮಿ ನಾಲೆ ಇವು ಬಹಳ ಹಳೆಯ ಕಾಲದವು. ನಾವು ವಿಶ್ವೇಶ್ವರಯ್ಯ ನಾಲಾ modernization ಮಾಡಿದಾಗ ಇವುಗಳನ್ನು modernization ಮಾಡಲಿಕ್ಕೆ ಆಗಲಿಲ್ಲ. ಅವು ಹಾಗೆಯೇ ಉಳಿದವು. ಈಗ ರಾಜಪರಮೇಶ್ವರಿ ನಾಲೆಯ ಕೊನೆಯ ಬಯಲು, ಅಚ್ಚುಕಟ್ಟು ನನ್ನ ಕ್ಷೇತ್ರದಲ್ಲಿವೆ. ಅಲ್ಲಿ ಪ್ರತಿ ವರ್ಷ ರೈತರು ನೀರಿಗಾಗಿ ಹೊಡೆದಾಟ. ಏಕೆಂದರೆ ನಾಲೆ ಬಹಳ ಕೆಟ್ಟು ಹೋಗಿದೆ. ಲೈನಿಂಗ್ ಇಲ್ಲ, ಎಂಥದು ಇಲ್ಲ. ಅನೇಕ ಸಾರಿ ನಾಲೆ ಬಂಡೆ ಹೊಡೆದು ಹೋಗಿ ಬೆಳೆ ನಷ್ಟವಾಗುವುದರಿಂದ ಪ್ರತಿ ವರ್ಷ ರೈತರು ನೀರಾವರಿ ಇಲಾಖೆಯ ಜೊತೆಗೆ ಜಗಳ ಆಡಲೇಬೇಕು. ಕೆಲವೊಮ್ಮೆ ಅವರವರಲ್ಲಿಯೇ ಜಗಳ ಅಂಟಿಕೊಂಡು ಬಿಡುತ್ತದೆ. ಮೇಲಿನವರು ನೀರು ಬಿಟ್ಟುಕೊಳ್ಳುವುದರಿಂದ ಕೆಳಗಡೆಯವರಿಂದ ನೀರು ಸಿಗುವುದಿಲ್ಲವೆಂದು ತೊಂದರೆಯಾಗಿ ದೊಡ್ಡ ದೊಡ್ಡ ಜಗಳ ಆಗಿ ಹೊಡೆದಾಟಗಳಾಗಿ ಕ್ರಿಮಿನಲ್ ಕೇಸ್‌ಗಳಾಗುತ್ತಿವೆ. ಅದಕ್ಕಾಗಿ ಆ ರಾಜಪರಮೇಶ್ವರಿ ನಾಲೆಗೆ ಕೂಡಲೇ, ಈ ತಿಂಗಳ ಹದಿನೈದರಿಂದ ನೀರು ಬಿಡಬೇಕಾಗುತ್ತದೆ. ಆ ನೀರು ಬಿಡುವುದನ್ನು ನಿಲ್ಲಿಸಿದ ಮೇಲಾದರೂ ಈ ವರ್ಷ ಆ ನಾಲೆಗೆ ಲೈನಿಂಗ್ ಮಾಡಿ ಆಧುನೀಕರಣ ಮಾಡದೇ ಹೋದರೆ ಸಮಸ್ಯೆ ಬಗೆಹರಿಯುವುದಿಲ್ಲ ಮತ್ತು ಇದರಿಂದಾಗಿ ರೈತರ ಉತ್ಪಾದನೆ ಕೂಡ ಕಡಿಮೆಯಾಗಿ ಬಿಡುತ್ತದೆ. ದಯಮಾಡಿ ಅದನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳುತ್ತದೆ.

ಶ್ರೀ ಬಸವರಾವ ಬೊಮ್ಮಾಯಿ : ಸರ್ವೇ ಮಾಡಿ ತೆಗೆದುಕೊಳ್ಳುವುದು ಲೇಟಾಗುವುದರಿಂದ, ಈಗ ನೀರು ಬಿಡುವಂಥ ಸಂದರ್ಭದಲ್ಲಿ ತುರ್ತು ಕೆಲಸಗಳು ಏನು ಇವೆ, ಇವುಗಳನ್ನು ತೆಗೆದುಕೊಳ್ಳುವುದಕ್ಕೆ ಆದೇಶ ಮಾಡುತ್ತೇವೆ.

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ. : ಸಿ.ಡಿ.ಎಸ್.ನಾಲೆ ಮತ್ತು ಗಿರಿಜಾನಾಲೆಗೆ ಸಂಬಂಧಪಟ್ಟಂತೆ ಮೊನ್ನೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರನ್ನು ಕರೆದುಕೊಂಡು ಪ್ರತಿ ಕಾಲುವೆಗಳ ಮೇಲೆ ಹೋಗಿ ನೋಡಿದಾಗ ತುರ್ತು ಕೆಲಸಗಳಿಗಾಗಿ ಸುಮಾರು 4 ರಿಂದ 5 ಕೋಟಿ ರೂಪಾಯಿಯ ಕೆಲಸದ ಕಾರ್ಯಕ್ರಮ ಪಟ್ಟಿಯನ್ನು ಕೊಡಲಾಗಿದೆ. ದಯಮಾಡಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಆ ಕೆಲಸದ ಕಾರ್ಯಕ್ರಮ ಪಟ್ಟಿಯನ್ನು ಅಪ್ರೂವಲ್

ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಇದರ ಜೊತೆಗೆ ಕೆ.ಆರ್.ಎಸ್.ವಜ್ರ ಮಹೋತ್ಸವ ಆಚರಿಸುವುದರ ಬಗ್ಗೆ ನಾನೊಂದು ಪ್ರಶ್ನೆ ಕೇಳಿದ್ದೆ. ಸುಮಾರು ಸಾರಿ ನಾನು ಮಾನ್ಯ ಸಚಿವರಲ್ಲಿ, ಇದೊಂದು ಒಳ್ಳೆಯ ಕಾರ್ಯಕ್ರಮ ಇದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡಿದೆ. ಅದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವು ಏನು ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಬಸವರಾವ ಬೊಮ್ಮಾಯಿ : ಕೆ.ಆರ್.ಎಸ್. ಕಟ್ಟಿ 2008 ಕ್ಕೆ 75 ವರ್ಷ ಮುಗಿದಿದೆ. ಅದರ ವಜ್ರ ಮಹೋತ್ಸವ ಆಚರಿಸುವುದು ಅಗತ್ಯವಿದೆ. ಅಷ್ಟರಲ್ಲಿ ಅಲ್ಲಿರುವಂಥ 16 ಗೇಟುಗಳನ್ನು ನಾವು ಸಂಪೂರ್ಣವಾಗಿ ಬದಲಾಯಿಸಿ ನಂತರ ಆಚರಣೆ ಸಮಾರಂಭ ಮಾಡಬೇಕೆನ್ನುವ ಉದ್ದೇಶವಿದೆ. ಏಕೆಂದರೆ, ಆಚರಣೆ ಕೇವಲ ಒಂದು ಹಬ್ಬವಾಗುವುದಕ್ಕಿಂತ ಅರ್ಥಪೂರ್ಣವಾಗಿ ಆಚರಿಸಬೇಕೆನ್ನುವ ದೃಷ್ಟಿಯಿಂದ, ಆ ಗೇಟುಗಳನ್ನು ಬದಲಾಯಿಸಲಿಕ್ಕೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಟೆಂಡರ್ ಪ್ರಕಟಣೆ ಆಗುತ್ತಿದೆ. ಆ ಗೇಟುಗಳನ್ನು ಹೊಸದಾಗಿ ಬದಲಾಯಿಸಿ ನಂತರ ಆಚರಣೆ ಮಾಡಿದರೆ ಬಹಳ ಅರ್ಥಪೂರ್ಣ ಎನ್ನುವುದು ನನ್ನ ಭಾವನೆ. ಗೇಟುಗಳನ್ನು ಬದಲಾಯಿಸುವುದು ಮತ್ತು ಆಧುನೀಕರಣ ಮಾಡಿದರೆ 75 ವರ್ಷ ತುಂಬಿದ ಸಂದರ್ಭದಲ್ಲಿ ಒಂದು ಕೊಡುಗೆ ಕೊಟ್ಟ ಹಾಗೆ ಆಗುತ್ತದೆ. ಆ ಹಿನ್ನಲೆಯಲ್ಲಿ ನಾನು ಸ್ವಲ್ಪ ಆಚರಣೆ ಸಮಾರಂಭವನ್ನು ಮುಂದಕ್ಕೆ ಹಾಕಿದ್ದೇನೆ. ಇಡೀ ಸದನ ಇದೇ ವರ್ಷ ಆಚರಿಸಬೇಕು ಎನ್ನುವುದಾದರೆ ಅದಕ್ಕೆ ನಮ್ಮ ಸರ್ಕಾರದ ಅಭ್ಯಂತರ ಏನಿಲ್ಲ.

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ. : ತುರ್ತು ಕೆಲಸಗಳಿಗಾಗಿ ದುಡ್ಡು ರಿಲೀಜ್ ಮಾಡುವುದರ ಬಗ್ಗೆ ಮಾನ್ಯ ಸಚಿವರು ಹೇಳಲಿಲ್ಲ.

ಶ್ರೀ ಬಸವರಾವ ಬೊಮ್ಮಾಯಿ : ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ಅವರು ಪ್ರಸ್ತಾವನೆ ಕಳುಹಿಸಿ ಕೊಡಲಿ ನಾನು ಜೊತೆಗೆ ಚರ್ಚಿಸಿ ಈ ಬಗ್ಗೆ ಪರೀಶಿಲಿಸುತ್ತೇನೆ.

33 (53) ಶ್ರೀ. ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗಾ)
ಶ್ರೀ ಜೆ. ಕರುಣಾಕರರೆಡ್ಡಿ (ಕಂದಾಯ ಸಚಿವರು)

ಅ) ಚಿಕ್ಕೋಡಿ ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಬಡ ವೃದ್ಧರ ಸಂಖ್ಯೆ ಎಷ್ಟು? ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಎಷ್ಟು ಬಡ ವೃದ್ಧರಿಗೆ ಮಾಸಿಕ ಸಹಾಯ ಧನ ನೀಡಲಾಗುತ್ತದೆ ; (ವಿವರ ನೀಡುವುದು)

ಈ ಬಗ್ಗೆ ಯಾವುದೇ ಸಮೀಕ್ಷೆ ಕೈಗೊಳ್ಳದಿರುವುದರಿಂದ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ. ಚಿಕ್ಕೋಡಿ ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿ 5223 ಬಡ ವೃದ್ಧರಿಗೆ ಸಂಧ್ಯಾ ಯೋಜನೆಯಡಿ ಮಾಸಾಶನ ನೀಡಲಾಗಿದೆ.